ದಿನಾಂಕ 15-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ಎ. ಪಿ. ಹೆಚ್ ವಕೀಲರವರಿಂದಃ**

ನಾನು 10 ನೇ ತರಗತಿವರೆಗೆ ಓದಿರುತ್ತೇನೆ. ನಾನು ಬೇಕರಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಉಡುಪಿಗೆ 10 ವರ್ಷವಾಗಿರುತ್ತದೆ. ನಾನು ಸಂಬಳಕ್ಕೆ ಕೆಲಸ ಮಾಡುತ್ತೇನೆ. ನನಗೆ ತಿಂಗಳಿಗೆ 50 ಸಾವಿರ ಬರುತ್ತದೆ. ನನಗೆ ನನ್ನ ಹಾತೆಗೆ ನೇರವಾಗಿ 30 ಸಾವಿರ ರೂ ಹಾಕುತ್ತಾರೆ ಉಳಿದ ಹಣ ನಗದು ರೂಪದಲ್ಲಿ ನೀಡುತ್ತಾರೆ, ನನಗೆ ಸಂಬಳ ಅರ್ಧ ಅಕೌಂಟಿಗೆ ಹಾಕಿರುವ ಬಗೆಗ ತೋರಿಸಲು ದಾಖಲೆ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಬಹುದು. ಸದ್ರಿ ದಾಖಲೆ ವಕೀಲರಿಗೆ ನೀಡಿರುವುದಿಲ್ಲ. ನನಗೆ ತಿಂಗಳ ಸಂಬಳ 50 ಸಾವಿರ ರೂ ಇದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ. ನನ್ನ ದನಿ ಹೆಸರು ಮರಿ. ಅವರ ಕೈ ಕೆಳಗೆ 5 ಜನ ಕೆಲಸ ಮಾಡುತ್ತಾರೆ. 5 ಜನರಿಗೂ ಒಂದೇ ಸಂಬಳ ಸಿಗುವುದಿಲ್ಲ. ನಾವು 5 ಜನ ಒಂದೇ ಊರಿನವರಿದ್ದ ಕಾರಣ ಅವರೇ ನಮ್ಮ ಕುಟುಂಬದವರಿಗೆ ಉಳಿದ ಹಣ ಕೊಟ್ಟು ಬರುತ್ತಾರೆ. ನಮ್ಮ ದನಿ ಈಗ ತಮಿಳುನಾಡಿನಲ್ಲಿ ಇದ್ದಾರೆ ಅವರು ಬರುತ್ತಾ ಹೋಗುತ್ತಾ ಇರುತ್ತಾರೆ. ನನಗೆ 50 ಸಾವಿರ ಸಂಬಳ ತೋರಿಸಲು ಯಾವುದೇ ಸಾಕ್ಷಿ ಇಲ್ಲ. ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಕೆಲಸ ಬಿಟ್ಟು 2 ವರೆ ವರುಷವಾಯಿತು. ನಾನು ಬೇಕಾರಿಯಲ್ಲಿ 8 ವರುಷ ಕೆಲಸ ಮಾಡಿರುತ್ತೇನೆ. ನನ್ನನ್ನು ಅವರು ಕೆಲಸದಿಂದ ತೆಗೆಯಲಿಲ್ಲ. ಆದರೆ ಈಗ ನನಗೆ ಕೆಲಸ ಮಾಡಲು ಆಗುವುದಿಲ್ಲ. ನಾನು ಉಡುಪಿಯ್ಲಿ ಕೆಲಸ ಮಾಡಲಿಲ್ಲ ಎಂದರೆ ಸರಿಯಲ್ಲ. ನನಗೆ ಬೇಕರಿ ಕೆಲಸದಿಂದ 50 ಸಾವಿರ ಸಂಬಳ ಬರುತ್ತದೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ ಯಾವುದೇ ಚಿಕಿತ್ಸೆ ಬಾಕಿ ಇಲ್ಲ ಎಂದರೆ ಸರಿಯಲ್ಲ.

ಈಗ ನನಗೆ ತಿಂಗಳಿಗೆ ಔಷದಿಗೆ 25 ಸಾವಿರ ಖರ್ಚು ಆಗುತ್ತದೆ. ಆ ಬಗ್ಗೆ ನಾನು ಒಂದು ತಿಂಗಳ ಹಿಂದೆ ತಮಿಳುನಾಡಿನಲ್ಲಿ ವೈದ್ಯರಿಗೆ ತೋರಿಸಿರುತ್ತೇನೆ. ನಾನು ಚಿಕಿತ್ಸೆ ಉಡುಪಿಯ ಮಣಿಪಾಲ ಆಸ್ಪತ್ರೆ ಯಲ್ಲಿ ಪಡೆದುಕೊಂಡಿರುತ್ತೇನೆ. ಒಂದು ವಾರ ಕೆಎಂಸಿ ಆಸ್ಪತ್ರೆಯಲ್ಲಿ ಒಳ ರೋಗಿ ದಾಖಲಾಗಿದ್ದೆ. ನಾನು ನನ್ನ ಊರಿನಲ್ಲಿ ಒಂದು ತಿಂಗಳು ಆಸ್ಪತ್ರೆಯಲ್ಲಿ ಒಳ ರೋಗಿಯಾಗಿದ್ದೆ. ನನಗೆ ಭವಿಷ್ಯದಲ್ಲಿ ಚಿಕಿತ್ಸೆ ಅಗತ್ಯವಿದೆ ಎಂದು ವೈದ್ಯರು ಹೇಳಿರುತ್ತಾರೆ. ನನಗೆ ನಡೆದಾಡಲು ತೊಂದರೆ ಇದೆ. ಎಡಕಾಲಿಗೆ ನಡೆಯಲು ತೊಂದರೆ ಇದೆ. ಈಗ ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಒಬ್ಬರೇ ಬಂದಿರುತ್ತೇನೆ. ಈಗ ನಾನು ಬರುವಾಗ ಊರುಗೋಲು ತರಲಿಲ್ಲ. ನನಗೆ ಯಾವುದೇ ಊರುಗೋಲು ಸಹಾಯ ಬೇಕಾಗಿಲ್ಲ ನಾನು ಸಾಮಾನ್ಯ ಮನುಷ್ಯರಂತೆ ನಡೆದಾಡುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನತೆ ಇಲ್ಲ ಎಂದರೆ ಸರಿಯಲ್ಲ. ನಿಪಿ 12 ಅಂಗನ್ಯೂನತಾ ಪ್ರಮಾಣ ಪತ್ರವನ್ನು ಈ ಕೇಸಿಗೋಸ್ಕರ ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ವೈದ್ಯಕೀಯ ಚಿಕಿತ್ಸೆ ಯನ್ನು ತಮಿಳುನಾಡಿನಲ್ಲಿ ಪಡೆದಿರುತ್ತೇನೆ. ನಾನು ನನ್ನ ಕೊನೆಯ ಚಿಕಿತ್ಸೆ ಯನ್ನು ತಮಿಳುನಾಡಿನಲ್ಲಿ ಪಡೆದಿರುತ್ತೇನೆ. ಆದರೆ ಸದ್ರಿ ಆಸ್ಪತ್ರೆಯವರು ನನಗೆ ಅಂಗನ್ಯೂನತಾ ಪ್ರಮಾಣ ಪತ್ರ ವನ್ನು ನೀಡಿಲ್ಲ. ನನಗೆ ಯಾವುದೇ ಅಂಗನ್ಯೂನತೆ ಇರಲಿಲ್ಲ ಅದಕ್ಕಾಗಿ ನನಗೆ ತಮಿಳುನಾಡಿನ ಆಸ್ಪತ್ರೆಯಿಂದ ಯಾವುದೇ ಅಂಗನ್ಯೂನತಾ ಪ್ರಮಾಣ ಪತ್ರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ತಮಿಳುನಾಡಿನಲ್ಲಿ ನನಗೆ ಚಿಕಿತ್ಸೆ ಮಾಡಿದವರು ಡಾಕ್ಟರ್ ಪ್ರಸಾದ್ . ಪ್ರಸಾದ್ ಎಂಬರವರು ನನಗೆ ಯಾವುದೇ ಚಿಕಿತ್ಸೆ ನೀಡಿಲ್ಲ ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತ ಆಗುವಾಗ ನಾನು ವಾಹನದಲ್ಲಿ ಇದ್ದೆ. ನಾನು ಉದ್ಯಾವರದಿಂದ ಕಟಪಾಡಿ ಕಡೆಗೆ ಹೋಗುವಾಗ ರಾ. ಹೆದ್ದಾರಿ ಮೇಲೆ ಅಪಘಾತವಾಗಿರುತ್ತದೆ. ನನ್ನ ಬೈಕಿಗೆ ಕಾರು ಚಾಲಕ ಹಿಂದಿನಿಂದ ಬಂದು ಗುದ್ದಿರುತ್ತಾನೆ. ಸದ್ರಿ ಅಪಘಾತ ರಸ್ತೆಯ ಎಷ್ಟು ಅಡಿ ಒಳಗಡೆ ಆಗಿರುತ್ತದೆ ಎಂದು ಗೊತ್ತಿಲ್ಲ. ನನಗೆ ವಾಹನ ಚಾಲನಾ ಪರವಾನಿಗೆ ಇರುವುದಿಲ್ಲ ಮತ್ತು ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿಯಲ್ಲ. ನನ್ನ ವಾಹನ ಚಾಲನಾ ಪರವಾನಿಗೆ ಎಷ್ಟು ತಾರೀಕಿನವರೆಗೆ ಚಾಲ್ತಿಯಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ವಾಹನ ಚಾಲನಾ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ. ಈ ಪ್ರಕರಣಕ್ಕೂ ಅಪಘಾತಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಬೈಕಿನಲ್ಲಿ ಒಬ್ಬನೇ ಹೋಗುತ್ತಿದ್ದೆ. ಬೈಕಿನ ಮಾಲಕ ಶರವಣನ್ , ಅವರು ನನ್ನ ಚಿಕ್ಕಪ್ಪನ ಮಗ . ಅಪಘಾತದಿಂದ ಈ ಗಾಯಗಳಾಗಿಲ್ಲ ಎಂದರೆ ಸರಿಯಲ್ಲ.

ಅಪಘಾತ ಆಗಿ ತುಂಬಾ ಕಾಲದ ನಂತರ ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ಗೊತ್ತಿಲ್ಲ. ನಾನು ಅರ್ಜಿಯನ್ನು ತಡವಾಗಿ ಸಲ್ಲಿಸುವುದಕ್ಕೆ ಯಾವುದೇ ಸಕಾರಣ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಯಾವ ಕಾರಣಕ್ಕಾಗಿ ನನ್ನ ವಕೀಲರು ನನ್ನ ಅರ್ಜಿಯನ್ನು ತಡವಾಗಿ ಸಲ್ಲಿಸಿದರು ಎಂದರೆ ಸಾಕ್ಷಿದಾರರು ಒಂದು ವಾರ ತಡವಾಗಿ ನನ್ನ ತಂಬಂದಿಕರು ದೂರನ್ನು ನೀಡಿದ್ದರು ನನಗೆ ನಡೆದಾಡಲು ಆಗುತ್ತಿರಲಿಲ್ಲ ಅದಕ್ಕಾಗಿ ನಾನು ತಡವಾಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನನ್ನ ವಾಹನಕ್ಕೆ ಡಿಕ್ಕಿಪಡಿಸಿದೆ ಎನ್ನಲಾದ ಕಾರಿನವರ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ.   ಉಡುಪಿ.